ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಈಗ ನಾನು ಕೇಳುವುದಕ್ಕೆ 03–03–2004 ರಲ್ಲಿ ಇಲಾಖೆ ಒಂದು ವರದಿ ಕೊಟ್ಟಿದೆ. ಈ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆಯೇ ಇಲ್ಲವೋ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಒಂದು ವಾರ ಕಾಲಾವಕಾಶ ಬೇಕೇ ?

ಅಧ್ಯಕ್ಷರು : ನಾನು ನಿಮಗೆ ಹೇಳುವುದೇನೆಂದರೆ, ನಾಳೆಯ ದಿವಸ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುತ್ತಾರೆ. ಅವರ ಎದುರಿಗೆ ಆ ಪ್ರಶ್ನೆಯನ್ನು ಪ್ರಶ್ನೋತ್ತರ ಅಲ್ಲದಿರುವ ಸಮಯದಲ್ಲಿ ಯಾವಾಗಲಾದರೂ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ. ತಾವು ಈಗ ಕುಳಿತುಕೊಳ್ಳಿ. ಈ ಪ್ರಶ್ನೆಯನ್ನು ಅವರಿಗೆ Post ಮಾಡಿದ್ದೇನೆ.

: 3632

: ಶ್ರೀ ರಾಜೇಂದ್ರನ್. ಎಸ್. (ಕೆ.ಜಿ.ಎಫ್)

: ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಕೋಲಾರದ ಕಂಬಾಲಪಲ್ಲಿನ ದುರ್ಘಟನೆಯಲ್ಲಿ ಮಡಿದವರ ಕುಟುಂಬದವರಿಗೆ ಸರ್ಕಾರ ನೀಡಿರುವ ಆಶ್ವಾಸನೆಯಂತೆ ಒದಗಿಸುವ ಪರಿಹಾರಗಳು ಯಾವುವು ;	ಕೋಲಾರದ ಕಂಬಾಲಪಲ್ಲಿನ ದುರ್ಘಟನೆಯಲ್ಲಿ ಮಡಿದವರ ಕುಟುಂಬದವರಿಗೆ ಸರ್ಕಾರವು ಈ ಕೆಳಗಿನಂತೆ ಪರಿಹಾರ ನೀಡಿರುತ್ತದೆ. 1) ಏಳು ಕುಟುಂಬ ವರ್ಗದವರಿಗೆ ತಲಾ ರೂ. 1.5 ಲಕ್ಷದಂತೆ ಒಟ್ಟು ರೂ.10.5 ಲಕ್ಷಗಳ ಪರಿಹಾರ ನೀಡಲಾಗಿದೆ. 2) ಒಂದು ಕುಟುಂಬದವರಿಗೆ ರೂ.1 ಲಕ್ಷ, ವಾಸಕ್ಕೆ ಒಂದು ಮನೆ ಮತ್ತು ಸರ್ಕಾರಿ ನೌಕರಿಯನ್ನು ನೀಡಲಾಗಿರುತ್ತದೆ. 3) ಅಲ್ಲದೇ ಈ ಘಟನೆಯಲ್ಲಿ ನೊಂದ ಒಟ್ಟು 69 ಸಂತ್ರಸ್ಥರಿಗೆ ವಸತಿ ಗೃಹಗಳನ್ನು ನಿರ್ಮಿಸಿ ಪುನರ್‌ವಸತಿಯನ್ನು ಕಲ್ಪಿಸಲಾಗಿರುತ್ತದೆ.

ಕ್ರಸಂ.	ಪ್ರಶ್ನೆಗಳು	ಉತ್ತರಗಳು
ಆ)	ಆ ಪೈಕಿ ಇನ್ನು ಯಾರಿಗಾದರು ಪರಿಹಾರ ನೀಡಬೇಕಾಗಿದೆಯೇ;	ಇಲ್ಲ.
ಇ)	ಹಾಗಿದ್ದಲ್ಲಿ, ಪರಿಹಾರ ನೀಡದಿರಲು ಕಾರಣಗಳೇನ ?	ಉದ್ಭವಿಸುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಸನ್ಮಾನ್ಯ ಸಭಾಧ್ಯಕ್ಷರೆ, ಕಂಬಾಲ ಪಲ್ಲಿಯಲ್ಲಿ more than five years ಹಿಂದೆ ಏನಾಗಿದೆಯೆಂದರೆ, ಅಲ್ಲಿ relief ಕೊಡುತ್ತೇವೆಂದು ಹೇಳಿದ್ದರು. ಎಷ್ಟು ಜನರಿಗೆ relief ಕೊಟ್ಟಿದ್ದಾರೆನ್ನುವುದರ ಪಟ್ಟಿ ಮಾಡಿ ಕೊಟ್ಟಿದ್ದಾರೆ. relief ಕೊಡುವ ಕಾಲದಲ್ಲಿ ಜಾತಿ ಆಧಾರದ ಮೇಲೆ ಕೊಡುವುದು ಒಂದು ಕಡೆ ಇದ್ದರೂ ಸಹ who are all suffered ಅವರೆಲ್ಲರಿಗೂ relief ಕೊಡಲೇಬೇಕು. ಆ ಪೈಕಿ ಇನ್ನು ಯಾರಿಗಾದರು ಪರಿಹಾರ ನೀಡಬೇಕಾಗಿದೆಯೇ ಎಂದು ಕೇಳಿದ್ದರೆ 'ಇಲ್ಲ' ಎಂದು ಹೇಳಿದ್ದಾರೆ. ಮತ್ತೆ out of them how many people ಗೆ ನೀವು ಸಹಾಯ ಮಾಡಿದ್ದೀರಿ ಎಂದು ಕೇಳಿದರೆ 'ಅವಶ್ಯಕತೆಯೇ ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಸರಿಯಾದ ಉತ್ತರ ಕೊಟ್ಟರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಅವರು ಏನೇನು ಮಾಹಿತಿಯನ್ನು ಕೇಳಿದ್ದಾರೆ ಅದೆಲ್ಲವನ್ನು ನಾವು ಕೊಟ್ಟಿದ್ದೇವೆ. ಅದರಲ್ಲಿ ವಿಶೇಷವಾಗಿ 44 ಕುಟುಂಬಗಳಿಗೆ ತಲಾ ಒಂದು ಎಕರೆ ಹತ್ತು ಗುಂಟೆ ಜಮೀನು ನೀಡಲಾಗಿದೆ. 66 ಕುಟುಂಬಗಳಿಗೆ ತಲಾ ಒಂದು ಜೊತೆ ಹಸುಗಳನ್ನು ನೀಡಲಾಗಿದೆ. 30 ಜನ ವಿದ್ಯಾರ್ಥಿಗಳಿಗೆ ಮುರಾರ್ಜಿ ಶಾಲೆ ಹಾಗೂ ಕೆಜಿಎಫ್ ಶಾಲೆಯಲ್ಲಿ ಓದುವ ಸಲುವಾಗಿ ಸೇರಿಸಲಾಗಿದೆ. 20 ಜನ ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿಯನ್ನು ನೀಡಲಾಗಿದೆ. 7 ಬೋರ್‌ವೆಲ್‌ಗಳನ್ನು ಮಾಡಿಸಲಾಗಿದೆ. ಮೃತಪಟ್ಟ ವ್ಯಕ್ತಿಗಳ ಹತ್ತಿರದ ಸಂಬಂಧಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಉದ್ಯೋಗ ನೀಡಲಾಗಿದೆ. ಈ ಘಟನೆಯಲ್ಲಿ ಮೃತಪಟ್ಟವರು ಏನು 7 ಜನ ಇದ್ದರು ಇವರೆಲ್ಲರಿಗೂ ಕೂಡ compensation

ಕೊಟ್ಟಿದ್ದೇವೆ. ಹಾಗೂ ಆ ಊರಲ್ಲಿ ಇರತಕ್ಕಂಥ ಜನರಿಗೆ ಭಯದ ವಾತಾವರಣ ಇತ್ತು ಎನ್ನುವ ದೃಷ್ಟಿಯಿಂದಲೇ ಅಲ್ಲಿರತಕ್ಕಂಥ 66 ಕುಟುಂಬಗಳೆಲ್ಲರಿಗೂ ಕೂಡ ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಅದಕ್ಕಾಗಿ ಯಾರೂ ಕೂಡ ಇದರಲ್ಲಿ ಬಿಟ್ಟುಹೋಗಿಲ್ಲ. ಆದರೆ ಕೆಲವು ಸಲ ಏನಾಗುತ್ತದೆ ಎಂದರೆ ನಾವು ಕೊಟ್ಟರೂ ಕೂಡ ಎಲ್ಲೋ ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೆ ಅದೇ highlight ಆಗತಕ್ಕಂಥದ್ದು ಆಗುತ್ತದೆ. But ಈ cases ನಲ್ಲಿ ಇದು ಎಲ್ಲಾ ಕ್ರಮವನ್ನು ಜರುಗಿಸಿದ್ದಾರೆ. ಅದಲ್ಲದೆ 'ಉದ್ಯೋಗ ಖಾತ್ರಿ ಯೋಜನೆ' ಅಡಿಯಲ್ಲಿ ಮತ್ತು 'ಅಂಗನವಾಡಿ ಶಾಲೆ' ತೆರೆಯಲು ಇದೆಲ್ಲದಕ್ಕೂ ಕೂಡ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಆದಷ್ಟು ಎಲ್ಲರಿಗೂ ಕೂಡ ಸಹಾಯ ಮಾಡತಕ್ಕಂಥ ವ್ಯವಸ್ಥೆ ಆಗಿದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, 11–03–2005 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಬಹಳ clear ಆಗಿ ಬರೆದಿದ್ದಾರೆ. Krishna Reddy ಎನ್ನುವ ಒಂದು family ಗೆ ಇನ್ನೂ ಸಹ ಅವರಿಗೆ ಪರಿಹಾರವನ್ನೇ ಕೊಟ್ಟಿಲ್ಲ. ಅವರನ್ನು ಯಾರೂ ನೋಡಿಲ್ಲ. 'ನಾವೇನು ಪಾಪ ಮಾಡಿದ್ದೇವೆಂದು' ಹೇಳುತ್ತಿರುವುದು ದಿನಾಲು ಪತ್ರಿಕೆಯಲ್ಲಿ ಬರುತ್ತಿದೆ. ಆ family ಗೆ ಸಹಾಯವನ್ನು ಏತಕ್ಕೆ ಮಾಡಬಾರದು ? It is not on the basis of caste. It is on the basis of relief. ಅಲ್ಲಿರುವ ಜನರಲ್ಲಿ ಯಾರ್ಯಾರಿಗೆ ಅನ್ಯಾಯವಾಗಿದೆಯೋ ಅವರಿಗೆಲ್ಲರಿಗೂ relief ಕೊಡಬೇಕು. ಅದರಂತೆ ಆ family ಗೂ ಪರಿಹಾರ ಕೊಟ್ಟರೆ ಒಳ್ಳೆಯದೆಂದು ಇದು ಪತ್ರಿಕೆಯಲ್ಲಿ ಸಹ ಬಂದಿದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ತಾವೇನಾದರೂ ಇದನ್ನು ನೋಡಿ ಕೊಡುವುದಿದ್ದರೆ ದಯಮಾಡಿ ಅವರಿಗೆ help ಮಾಡಿ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಿಗೂ, ಬಹುಶಃ ಆ ಪತ್ರಿಕೆಯವರಿಗೂ ಸಹ ಇನ್ನೂ ಮಾಹಿತಿ ಸಿಕ್ಕಿಲ್ಲವೆಂದು ತೋರುತ್ತದೆ. ಮೊಕದ್ದಮೆ ಸಂಖ್ಯೆ : 46: 2000 ಪ್ರಕರಣದಲ್ಲಿ ಮೃತಪಟ್ಟ ಕೃಷ್ಣಾರೆಡ್ಡಿಯ ಪತ್ನಿ ಶ್ರೀಮತಿ ಗೌರಮ್ಮ ಎಂಬಾಕೆಗೆ ಸರ್ಕಾರದ ವತಿಯಿಂದ ಒಂದು ಲಕ್ಷ ರೂಪಾಯಿಗಳ ಪರಿಹಾರ ಮಂಜೂರಾಗಿರುತ್ತದೆ. ಅಲ್ಲದೆ ವಾಸಕ್ಕೆ ಒಂದು ಮನೆಯನ್ನೂ ಸಹ ಕಲ್ಪಿಸಿಕೊಡಲಾಗುತ್ತದೆ. ಮತ್ತು ಆಕೆಗೆ 'ಡಿ' ಗ್ರೂಪ್ ಸರ್ಕಾರಿ ನೌಕರಿಯನ್ನು ಅನುಕಂಪದ ಆಧಾರದ ಮೇರೆಗೆ ನೀಡಲಾಗಿದೆ. ಈ ಮಾಹಿತಿ ಕೂಡ ಇವತ್ತು ನನ್ನ ಹತ್ತಿರ ಇದೆ. ಒಂದು ವೇಳೆ ಇನ್ನೂ ನೌಕರಿ ಸಿಕ್ಕಿಲ್ಲವೆಂದರೆ ಅದನ್ನು ನಾವು verify ಮಾಡಿಸಿ ಕೊಡಿಸ ತಕ್ಕಂಥ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಲಕ್ಷ ರೂಪಾಯಿ ಸಿಕ್ಕಿದೆ. ಕೆಲಸ ಸಿಕ್ಕಿರುವುದು ಅದೆಲ್ಲ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಮಾಹಿತಿ ಪ್ರಕಾರ ಅವರು ಹೇಳಿದ್ದಾರೆ. ಒಂದು ವೇಳೆ ಇಲ್ಲ ಎಂದರೆ ಖಂಡಿತವಾಗಿ verify ಮಾಡಿಸಿ ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

: 2584

: ಶ್ರೀ ತಿಮ್ಮರಾಯಪ್ಪ. ಕೆ. ಎಂ. (ಪಾವಗಡ)

: ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಪಾವಗಡ ವೆಂಕಟಮ್ಮನಹಳ್ಳಿ ಘಟನೆಗೆ ಮುಂಚೆ ನಕ್ಸಲೀಯ ಪ್ರದೇಶಗಳಲ್ಲಿ ವಿಶೇಷ ಕ್ರಿಯಾ ಯೋಜನೆಗಳನ್ನು ಉಡುಪಿ, ಚಿಕ್ಕಮಗಳೂರು ಗಳಿಗೆ ಮಾತ್ರ ಸೀಮಿತ ಗೊಳಿಸಲು ಕಾರಣವೇನು ?	ಮಲೆನಾಡಿನ ಭಾಗವಾದ ಚಿಕ್ಕಮಗಳೂರು ಜಿಲ್ಲೆಯ ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದಿಂದ ಹೊರಬರಲು ಇಚ್ಛಿಸುವ ಗಿರಿಜನ ಕುಟುಂಬಗಳ ಪುನರ್ವಸತಿಗಾಗಿ ಅರಣ್ಯ ಇಲಾಖೆ ಅಭಿವೃದ್ಧಿ ಪ್ರಸ್ತಾವನೆ ಯೊಂದನ್ನು ತಯಾರಿಸಿದ್ದು, ಇದರ ವೆಚ್ಚ ರೂ. 60 ಕೋಟಿ ಎಂದು ಅಂದಾಜಿಸ ಲಾಗಿತ್ತು. ಇದರ ಮೊದಲನೇ ಹಂತಕ್ಕಾಗಿ ರೂ. 23 ಕೋಟಿಗಳ ವಿವರ ಅಂದಾಜು ತಯಾರಿಸಿ, ಈ ಪ್ರಸ್ತಾವನೆಯನ್ನು ರಾಜ್ಯದ ಅರಣ್ಯ ಇಲಾಖೆಯಿಂದ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯಕ್ಕೆ ಅನು ಮೋದನೆಗಾಗಿ ಕಳುಹಿಸಲಾಗಿದೆ. ಮಂಜೂ ರಾತಿ ನಿರೀಕ್ಷಿಸಲಾಗಿದೆ.ಅಭಿವೃದ್ಧಿ ಆಯುಕ್ತ ರಾದ ಶ್ರೀ ಚಿರಂಜೀವಿ ಸಿಂಗ್ ನೇತೃತ್ವದ ತಂಡ ಸಮಗ್ರ ಅಧ್ಯಯನ ನಡೆಸಿಈಗ ತಾನೇ ವರದಿ ಸಲ್ಲಿಸಿದೆ. ರಾಜ್ಯದಲ್ಲಿ ನಕ್ಸಲೀಯರಿಂದ ಪೀಡಿತವಾದ ಎಲ್ಲಾ ಭಾಗಗಳ ಅಭಿವೃದ್ಧಿಗಾಗಿ,
ಆ)	ಪಾವಗಡ ತಾಲೂಕಿನಲ್ಲಿ ಸುಮಾರು 1989 ರಿಂದಲೂ ನಕ್ಸಲೀಯ ಚಟುವಟಿಕೆಗಳು ಕಾಣಿಸಿಕೊಂಡಿದ್ದರೂ ಕ್ರಿಯಾ ಯೋಜನೆಯನ್ನು ಕೈ ಬಿಡುವ ಕಾರಣವೇನು;	